ಸುವರ್ಣ ಸಂಭ್ರಮ

# ನಿವೇದನೆ

## ಶೌಚಾಲಯ ನಿರ್ಮಾಣಕ್ಕೆ ತಡ ಯಾಕೆ?

ಕೇಂದ್ರದ ನಿರ್ಮಲ ಭಾರತ ಅಭಿಯಾನ ಹಾಗೂ ರಾಜ್ಯ ಸರ್ಕಾರದ ನಿರ್ಮಲ ಕರ್ನಾಟಕ ಯೋಜನೆಯನ್ವಯ ಶೌಚಾಲಯ ನಿರ್ಮಾಣಕ್ಕೆ ಪ್ರತಿ ಮನೆಗೆ 10,100ರೂ. ಉಚಿತ ನೆರವು ದೊರೆಯುತ್ತಿದೆ. ಗ್ರಾಮೀಣ ಜನತೆ ತಮ್ಮ ಮನೋಭಾವ ಬದಲಿಸಿಕೊಂಡು ಶೌಚಾಲಯ ನಿರ್ಮಾಣಕ್ಕೆ ಮುಂದಾಗಬೇಕು.

ದೇವರ ಕೃಪೆಗೆ ಒಳಗಾಗಲು ಸ್ವಚ್ಛತೆಯೇ ರಹದಾರಿ ಎಂಬುದು ಇಂಗ್ಲಿಷ್‌ನ ಜನಪ್ರಿಯ ನಾಣ್ಣುಡಿ. ಸ್ವಚ್ಛತೆ ಮನುಷ್ಯನಿಗೆ ಬಹಳ ಮುಖ್ಯ. ಮನುಷ್ಯನ ಆರೋಗ್ಯಕ್ಕೆ, ಅವನ ಸರ್ವತೋಮುಖ ಅಭಿವೃದ್ಧಿಗೆ ನೈರ್ಮಲ್ಯವೇ ಮೂಲಭೂತ ಅಂಶ. ಪ್ರತಿ ಮನೆಯೂ ಸ್ನಾನಗೃಹದ ಜತೆಗೆ ಶೌಚಾಲಯ ಹೊಂದುವುದು ಈ ದೃಷ್ಟಿಯಿಂದ ಅತ್ಯಗತ್ಯ. ಆದರೆ ಹಳ್ಳಿಗಳ ದೇಶ ಭಾರತದಲ್ಲಿ ಶೌಚಾಲಯಗಳದ್ದೇ ಕೊರತೆ. ಇಲ್ಲವೇ ಇಲ್ಲ ಎಂದರೂ ಆದೀತು. 2009ರಲ್ಲಿ ಸ್ವಯಂ ಸೇವಾ ಸಂಸ್ಥೆಯೊಂದು ನಡೆಸಿದ ಅಧ್ಯಯನದ ಪ್ರಕಾರ ದೇಶದ ಶೇ.72 ಜನರಿಗೆ ಬಯಲೇ ಶೌಚಾಲಯ! ಈಗಲೂ ಪರಿಸ್ಥಿತಿಯಲ್ಲಿ ಬಹಳ ಬದಲಾವಣೆ ಏನೂ ಆಗಿಲ್ಲ. ಶೌಚಾಲಯ ಇಲ್ಲದ ವಿಶ್ವದ ಕುಟುಂಬಗಳಲ್ಲಿ ಭಾರತದ್ದೇ ಶೇ.60ರ ಕೊಡುಗೆ. ಭಾರತದಲ್ಲಿ ಉತ್ಪಾದನೆ ಕುಸಿತ ಮತ್ತು ಪ್ರವಾಸೋದ್ಯಮದ ಹಿನ್ನಡೆಗೆ ಶೌಚಾಲಯ ಕೊರತೆಯೇ ಕಾರಣ. ಇದರಿಂದಾಗಿ 24,000 ಕೋಟಿ ರೂಪಾಯಿಗೂ ಹೆಚ್ಚಿನ ನಷ್ಟ ಭಾರತಕ್ಕೆ ಉಂಟಾಗಿದೆ ಎಂದು ವಿಶ್ವಸಂಸ್ಥೆಯ ವರದಿ ಹೇಳುತ್ತದೆ. ಶೌಚಾಲಯಗಳ ಕೊರತೆ ಕಾರಣಕ್ಕೆ ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ಭಾರತ ತಲೆ ತಗ್ಗಿಸುವಂತಾಗಿದೆ.

ಹಳ್ಳಿಗಾಡಿನಲ್ಲಿ ಆಸ್ತಮಾ, ಟೈಫಾಯ್ಡ್, ಜಾಂಡಿಸ್, ಕಾಲರಾ, ವಾಂತಿಭೇದಿ ಮುಂತಾದ ಸಾಂಕ್ರಾಮಿಕ ರೋಗಗಳು ವ್ಯಾಪಕವಾಗಿ ಹರಡುತ್ತವೆ. ಶೌಚಾಲಯಗಳಿಲ್ಲದಿರುವುದೇ ಇದಕ್ಕೆ ಕಾರಣ. ಗ್ರಾಮೀಣ ಶಾಲೆಗಳಲ್ಲಿ ಶೌಚಾಲಯಗಳನ್ನು ಕೇಳಲೇಬೇಡಿ. ಹೆಣ್ಣುಮಕ್ಕಳು ಮಧ್ಯದಲ್ಲಿ ಶಾಲೆ ತೊರೆಯಲು ಶೌಚಾಲಯಗಳು ಇಲ್ಲದಿರುವುದೇ ಕಾರಣ. ಬೆಳಗಿನ ಹೊತ್ತು ಚೆಂಬು ಹಿಡಿದು ಬಹಿರ್ದೆಸೆಗೆ ಹೋಗುವ ದೃಶ್ಯಗಳು ಗ್ರಾಮಾಂತರ ಭಾಗದಲ್ಲಿ ಸಾಮಾನ್ಯ. ಅನೇಕ ಹಳ್ಳಿಗಳಲ್ಲಿ ಮಹಿಳೆಯರಿಗೆ ಬಯಲು ಶೌಚಾಲಯಕ್ಕೂ ಮುಕ್ತ ಅವಕಾಶ ಇಲ್ಲ. ಹಾಗಾಗಿ ಹಗಲಿಡೀ ಅವರು ನಿಯಂತ್ರಿಸಿಕೊಳ್ಳಬೇಕು, ರಾತ್ರಿ ಹೊತ್ತು ಮಾತ್ರ ಬಹಿರ್ದೆಸೆಗೆ ತೆರಳಬೇಕು ಎಂದರೆ ನಾವು ಇನ್ನೂ ಯಾವ ಯುಗದಲ್ಲಿ ಇದ್ದೇವೆ ಎನಿಸುವುದಿಲ್ಲವೆ? ಸ್ವತಃ ಕೇಂದ್ರದ ಗ್ರಾಮೀಣಾಭಿವೃದ್ಧಿ ಸಚಿವ ಜೈರಾಂ ರಮೇಶ್ ಅವರೇ ಆಗಾಗ ಹೇಳುವ ಮಾತು, 'ಭಾರತದಲ್ಲಿ ಶೌಚಾಲಯಗಳಿಗಿಂತ ಹೆಚ್ಚಿನ ಸಂಖ್ಯೆಯ ದೇವಾಲಯಗಳಿವೆ!' ನೈರ್ಮಲ್ಯರಹಿತ ಭಾರತದ ಸ್ಥಿತಿಗೆ ಹಿಡಿದ ಕನ್ನಡಿ ಈ ಮಾತುಗಳು.

ನಿರ್ಮಲ ಭಾರತ ಅಭಿಯಾನಕ್ಕೆ ಕೇಂದ್ರ ಸರ್ಕಾರ ಉದಾರವಾಗಿ ಅನುದಾನ ನೀಡುತ್ತಿದೆ. ರಾಜ್ಯ ಸರ್ಕಾರ ನಿರ್ಮಲ ಕರ್ನಾಟಕ ಯೋಜನೆಯನ್ನು ಜಾರಿಗೊಳಿಸಿದೆ. ಎಂ.ಪಿ.ಪ್ರಕಾಶ್ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ಚುನಾವಣೆಗೆ ನಿಲ್ಲಬಯಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಶೌಚಾಲಯ ಹೊಂದಿರಬೇಕು ಎಂದು ಕಾನೂನನ್ನೇ ಮಾಡಿದರು. ಸರ್ಕಾರದ ಯೋಜನೆಗಳ ಯಶಸ್ವಿ ಜಾರಿಗೆ ಸ್ವಯಂ ಸೇವಕರು, ಎಂಜಿನಿಯರುಗಳನ್ನು ನೇಮಿಸಿದ ಸಿರಿಗೆರೆ ಶ್ರೀಗಳು 1990ರ ದಶಕದಲ್ಲಿ ಒಂದು ಆಂದೋಲವನ್ನೇ ರೂಪಿಸಿದರು. ದೇವರಕೋಣೆ ನಿರ್ಮಿಸುವಷ್ಟೇ ಆದ್ಯತೆಯಿಂದ ಶೌಚಾಲಯಗಳನ್ನು ನಿರ್ಮಿಸಿಕೊಳ್ಳಿ ಎಂದು ನಿರಂತರವಾಗಿ ಅವರು ಪ್ರತಿಪಾದಿಸಿದ ಹಿನ್ನೆಲೆಯಲ್ಲಿ ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಲ್ಲಿ ತಕ್ಕಮಟ್ಟಿಗೆ ಶೌಚಾಲಯಗಳು ನಿರ್ಮಾಣವಾದವು. ಮತ್ತೆ ಕೆಲವೆಡೆ ಸ್ವಯಂ ಸೇವಾ ಸಂಸ್ಥೆಗಳು ಇಂತಹದೇ ಪ್ರಯತ್ನ ಮಾಡಿದ್ದರ ಫಲವಾಗಿ ಕೆಲವಾದರೂ ಶೌಚಾಲಯಗಳು ನಿರ್ಮಾಣವಾಗಿವೆ. ಆದರೆ ಬಹುಪಾಲು ಜಿಲ್ಲೆಗಳಲ್ಲಿ ಈ ಯೋಜನೆ ಇನ್ನೂ ಅಸಮರ್ಪಕವಾಗೇ ಇದೆ.

2013-14ನೇ ಸಾಲಿನಲ್ಲಿ 6 ಲಕ್ಷ ಶೌಚಾಲಯ ನಿರ್ಮಿಸಲು ರಾಜ್ಯ ಸರ್ಕಾರ ಪಣತೊಟ್ಟಿದೆ. 2012-13ನೇ ಸಾಲಿನ ಬಾಕಿ ಉಳಿದ 50ಕೋಟಿ ರೂ.ಗಳನ್ನು ಮರುಹಂಚಿಕೆ ಮಾಡಿ ಮಾರ್ಚ್‌ನೊಳಗಾಗಿ ಖರ್ಚು ಮಾಡಲು ಸೂಚಿಸಲಾಗಿದೆ. ನಿರ್ಮಲ ಭಾರತ ಯೋಜನೆ ಅಧಿಕಾರಿಗಳು ಜನವರಿ ಅಂತ್ಯಕ್ಕೆ ಮೂರೂವರೆ ಲಕ್ಷ ಶೌಚಾಲಯ ನಿರ್ಮಿಸಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಗ್ರಾಮ ಪಂಚಾಯ್ತಿಗಳು ಎರಡೂಮುಕ್ಕಾಲು ಲಕ್ಷ ಶೌಚಾಲಯ ನಿರ್ಮಾಣ ಮಾಡಿದ್ದರ ವರದಿ ನೀಡಿವೆ. ಕಳೆದ ಐದು ವರ್ಷಗಳಲ್ಲಿ 44ಲಕ್ಷ ಶೌಚಾಲಯ ನಿರ್ಮಾಣ ಆಗಿವೆ. ಆದರೆ ಲೆಕ್ಕಕ್ಕೆ ಸಿಗುವುದು 25 ಲಕ್ಷ ಮಾತ್ರ ಎಂದು ಸ್ವತಃ ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ.ಪಾಟೀಲರು ನಾಲ್ಕು ತಿಂಗಳ ಹಿಂದೆ ಹೇಳಿದ್ದರು. ಶೌಚಾಲಯ ನಿರ್ಮಾಣದ ನೆಪದಲ್ಲಿ ನಡೆದಿರುವ ಗೋಲ್‌ಮಾಲ್‌ಅನ್ನು ಈ ಹೇಳಿಕೆ ಬಹಿರಂಗಪಡಿಸಿದೆ.

ಶೌಚಾಲಯ ನಿರ್ಮಿಸಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯ ಎಂಬ ಭಾವನೆ ಜನತೆಯಲ್ಲಿ ಮೂಡಬೇಕು. ಉದ್ಯೋಗ ಖಾತರಿ ಯೋಜನೆಯನ್ವಯ 5,400 ರೂ., ನಿರ್ಮಲ ಭಾರತ ಯೋಜನೆಯನ್ವಯ 4,700 ರೂ. ಸೇರಿದಂತೆ ಒಟ್ಟು 10,100 ರೂ. ಸಹಾಯಧನ ಸಿಕ್ಕಾಗ ಮತ್ತೇಕೆ ತಡ. ಮನೆಯಲ್ಲೇ ಶೌಚಾಲಯ ನಿರ್ಮಿಸಿಕೊಳ್ಳಲು ಹಿಂದೇಟು ಹಾಕುವ ಗ್ರಾಮೀಣ ಜನರ ಮನೋಭಾವ ಬದಲಾಗಬೇಕು. ಸುಳ್ಳು ಅಂಕಿಅಂಶಕ್ಕೆ, ಭ್ರಷ್ಟಾಚಾರಕ್ಕೂ ಇದರಿಂದ ಕಡಿವಾಣ ಬೀಳಬಹುದು.

■ **ಗುಡಿಹಳ್ಳಿ ನಾಗರಾಜ**

